**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ21-03-2022**

**ಪಾಟೀ ಸವಾಲುಃ** 2 ರಿಂದ 4 ಮತ್ತು 6 ರಿಂದ 8 ನೇ ಪ್ರತಿವಾದಿಯರ ಪರ ಶ್ರೀ ಸಿ.ಡಿ.ಎಸ್ ವಕೀಲರಿಂದ

ನನ್ನ ತಂದೆ ಈಗ ಬದುಕಿರುವುದಿಲ್ಲ. ನನ್ನ ಹೆಂಡತಿಯ ಹೆಸರು ನಮಗೆ ಒಟ್ಟು **4** ಜನ ಹೆಣ್ಣುಮಕ್ಕಳು ಮತ್ತು ಒಬ್ಬ ಮಗ ಇರುತ್ತಾರೆ. ನಾಗಮ್ಮ ಮತ್ತು ಜನಾರ್ಧನ್ ಕುರೂಪ್ ರವರು ಜೆ ಅನಿಲ್ ರವರಿಗೆ ವಾದಿಯನ್ನು ಮದುವೆ ಮಾಡಿಕೊಡುವಂತೆ ಕೇಳಿಕೊಂಡು ಬಂದಿರುವುದಿಲ್ಲ. ಪ್ರತಿವಾದಿ **1** ರಿಂದ **8** ರವರನ್ನು ನಾನು ಅವರ ಮನೆಗೆ ಹೋಗಿ ನೋಡಿರುವುದಿಲ್ಲ. ವಾದಿಯು ಜೆ ಅನಿಲ್ ರವರು ಮದುವೆಯಾಗಿರುವ ಬಗ್ಗೆ ತೋರಿಸಲು ಯಾವುದೇ ಮದುವೆ ಪತ್ರಿಕೆ ಹಾಗೂ ಪೋಟೋ ಇರುವುದಿಲ್ಲ. ಜೆ ಅನಿಲ್ ಮತ್ತು ವಾದಿ ಜೊತೆಯಲ್ಲಿರುವ ಪೋಟೋ ನೋಡಿರುತ್ತೇನೆ ಅದು ವಾದಿಯ ಬಳಿ ಇದೆ. ವಾದಿಯನ್ನು ಜೆ ಅನಿಲ್ ರವರಿಗೆ ಮದುವೆ ಮಾಡಿಕೊಡುವಾಗ ನಾನು ಜೆ ಅನಿಲ್ ರವರ ಜಾತಿ , ಕುಲ ಮತ್ತು ಅವರು ಎಲ್ಲಿಂದ ಬಂದಿರುತ್ತಾರೆ ಎಂಬ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ. ನನ್ನ ಎಲ್ಲಾ ಮಕ್ಕಳ ಮದುವೆಯಾಗಿರುತ್ತದೆ. ವಾದಿಯನ್ನು ಹೊರತುಪಡಿಸಿ ನನ್ನ ಉಳಿದ ಮಕ್ಕಳ ಮದುವೆ ಮಾಡಿದ ಬಗ್ಗೆ ಮದುವೆ ಪತ್ರಿಕೆ ಮತ್ತು ಪೋಟೋಗಳು ಇವೆ ಎಂದರೆ ಸರಿ. ಜೆ ಅನಿಲ್ ರವರು **1** ನೇ ವಾದಿಯನ್ನು ಮದುವೆಯಾಗುವ ಪೂರ್ವದಲ್ಲಿ ಅವರಿಗೆ ಮದುವೆಯಾದ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ. ದಿಃ **26-06-1998** ರಲ್ಲಿ ಜೆ ಅನಿಲ್ ರವರ ಮದುವೆ ಕಮಲಾಕ್ಷಿ ಮತ್ತು ಪಾಪಣ್ಣ ರವರ ಮಗಳು ಪಾವನ ರವರ ಜೊತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಜೆ ಅನಿಲ್ ರವರು ಮೃತಪಟ್ಟು **25** ವರ್ಷ ಆಗಿರುತ್ತದೆ. ಜೆ ಅನಿಲ್ ರವರು ಪೌತಿಯಾದ ಕೂಡಲೇ ನಾವು ನಾಗಮ್ಮ ಮತ್ತು ಜಾನರ್ಧನ್ ರವರ ಬಳಿ ಹೋಗಿ ಅನಿಲ್ ರವರಿಗೆ ಬರಬೇಕಾದ ಹಿಸ್ಸೆಯನ್ನು ಕೊಡುವಂತೆ ಕೇಳಿರುತ್ತೇವೆ. ದಾವಾ ದಾಖಲಿಸುವ ಪೂರ್ವದಲ್ಲಿ ಜೆ ಅನಿಲ್ ರವರು ಆಸ್ತಿಗಳ ಸಂಬಂಧ ಯಾವ ದಾಖಲಾತಿ ಮಾಡಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ದಿಃ **21-07-1998** ರಲ್ಲಿ ಜೆ ಅನಿಲ್ ಮತ್ತು ಪಾವನ ನಾಗಮ್ಮರವರಿಂದ ನಗದು **35** ಸಾವಿರ ಹಣ ಪಡೆದು ಅವರ ಹಿಸ್ಸೆಯ ಹಕ್ಕನ್ನು ನಾಗಮ್ಮ ರವರ ಹೆಸರಿಗೆ ಹಕ್ಕು ಖುಲಾಸೆ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಜೆ ಅನಿಲ್ ರವರು ಮೃತಪಡುವ ಕಾಲಕ್ಕೆ ಆತನ ಹೆಸರಿನಲ್ಲಿ ಯಾವುದೆ ಚರ ಮತ್ತು ಸ್ಥಿರ ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ.

ಜೆ ಅನಿಲ್ ರವರು **1** ನೇ ವಾದಿಯನ್ನು ಕಾನೂನುಬದ್ದವಾಗಿ ಮತ್ತು ಶಾಸ್ತ್ರೋಕ್ತವಾಗಿ ಮದುವೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಜೆ ಅನಿಲ್ ರವರರಿಗೆ ದಾವಾ ಆಸ್ತಿಯಲ್ಲಿ ಯಾವುದೆ ಹಕ್ಕು ಇಲ್ಲದ ಕಾರಣ ವಾದಿಯರಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು **1** ನೇ ವಾದಿಯ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. **1** ನೇ ವಾದಿಯ ಮದುವೆ ಜೆ ಅನಿಲ್ ರವರ ಜೊತೆ ಆದ ಬಗ್ಗೆ ತೋರಿಸಲು ಯಾವುದೇ ದಾಖಲಾತಿ ಇಲ್ಲ ಎಂದರೆ ಸರಿ.

**5** ನೇ ಪ್ರತಿವಾದಿ ಪರ ಶ್ರೀ ಐ ಇ ಪಿ ವಕೀಲರು ಹಾಜರಿದ್ದು **1** ರಿಂದ **4** ಮತ್ತು **6** ರಿಂದ **8** ನೇ ಪ್ರತಿವಾದಿ ಪರ ವಕೀಲರು ಮಾಡಿದ ಪಾಟೀ ಸವಾಲುನ್ನು **5** ನೇ ಪ್ರತಿವಾದಿ ಪರವಾಗಿ ಅಳವಡಿಸಿಕೊಳ್ಳುವಂತೆ ಕೇಳಿದ ಮೇರೆಗೆ ಯಥಾವತ್ತಾಗಿ ಅಳವಡಿಸಿಕೊಳ್ಳಲಾಯಿತು.

೯ ನೇ ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ ಃ ಇಲ್ಲ.**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಿವಿಲ್ ನ್ಯಾಯಾಧೀಶರು